**ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಆರ್ ಆರ್., 5 ರಿಂದ 7 ನೇ ಪ್ರತಿವಾದಿ ಪರ ವಕೀಲರಿಂದ**

**2.** ಓಎಸ್ 69/2015 ರ ದಾವೆಯಲ್ಲಿ ರಾಜಿ ಮಾಡಿಕೊಂಡಿರುವಂತೆ ಎ ಶೆಡ್ಯೂಲ್ ಆಸ್ತಿಗಳು ಚಂಗಪ್ಪನಿಗೆ ಹಾಗೂ ಬಿ ಶೆಡ್ಯೂಲ್ ಆಸ್ತಿಗಳು ಶಿವಣ್ಣನ ಭಾಗಕ್ಕೆ ಹೋಗಿರುತ್ತದೆ. ನಾನು ಈ ದಾವೆಯನ್ನು ಚಂಗಪ್ಪನ ಭಾಗಕ್ಕೆ ಹೋಗಿರುವಂತಹ ಜಮೀನುಗಳಿಗೆ ಸಂಬಂದಿಸಿದಂತೆ ಸಲ್ಲಿಸಿದ್ದೇನೆ. ಈ ದಾವೆಯನ್ನು ಶಿವಣ್ಣನ ಭಾಗಕ್ಕೆ ಹೋಗಿರುವಂತಹ ಜಮೀನನ್ನು ಸೇರಿಸಿಲ್ಲ ಎಂದರೆ ಸರಿ.

**3.** ಕೆಎ-40-ಎಂ-2538 ಶೀಪ್ಟ್ ಡಿಸೈರ್ ಕಾರು ನನ್ನ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯೂ ಅದನ್ನು ನಮ್ಮ ಅಣ್ಣಂದಿರಾದ ನಾಗರಾಜಪ್ಪ ಮತ್ತು ವೆಂಕಟರವಣಪ್ಪ ರವರು ನನ್ನ ಸಹಿ ತೆಗೆದುಕೊಂಡು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಾರನ್ನು ಸಾಲ ತೀರಿಸುವ ಸಲುವಾಗಿ ನನ್ನ ಅಣ್ಣಂದಿರು ಮಾರಾಟ ಮಾಡಿರುತ್ತಾರೆ. ನನ್ನ ಅಣ್ಣಂದಿರೇ ಕಾರನ್ನು ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ. ಸಾಕ್ಷಿಯೂ ಮುಂದುವರೆದು ಅವರು ಸಹಿ ಹಾಕು ಅಂತ ಹೇಳಿದಕ್ಕೆ ನಾನು ಸಹಿ ಹಾಕಿರುತ್ತೇನೆ ಅವರು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

**4.** ಓಎಸ್ 69/2015 ರ ದಾವೆಯನ್ನು ಸಲ್ಲಿಸುವ ಕಾಲಕ್ಕೆ ನಮ್ಮ ಒಟ್ಟು ಕುಟುಂಬಕ್ಕೆ 2 ಸೀಮೇ ಹಸು ಹಾಗೂ 2 ಜೊತೆ ಎತ್ತುಗಳು ಇದ್ದವೂ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬಕ್ಕೆ 2 ಸೀಮೇ ಹಸು ಹಾಗೂ 2 ಜೊತೆ ಎತ್ತುಗಳು ಇದ್ದರೂ ಕೂಡ ಇರಲಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**5.** 11 ನೇ ದಾವಾ ಆಸ್ತಿಯಲ್ಲಿ 4 ಬೋರ್ ವೆಲ್ ಗಳು ಇರುತ್ತವೆ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ. ಹಾಗಾದರೆ ನಮ್ಮ ಎಲ್ಲಾ ಜಮೀನಿನಲ್ಲಿ ಎಷ್ಟು ಬೋರ್ ವೆಲ್ ಗಳು ಇರುತ್ತವೆ ಎಂದರೆ ಸಾಕ್ಷಿಯೂ ಒಂದೇ ಇದ್ದು ಅದೂ ಕೂಡ ಈಗ ನಿಂತು ಹೋಗಿರುತ್ತದೆ ಎಂದು ನುಡಿಯುತ್ತಾರೆ. 11 ನೇ ದಾವಾ ಆಸ್ತಿಯಲ್ಲಿರುವ 4 ಬೊರ್ ವೆಲ್ ಗಳಲ್ಲಿನ ನೀರನ್ನು ಉಪಯೋಗಿಸಿಕೊಂಡು ನಮ್ಮ ಬೇರೆ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಇನ್ನೊಂದು ಪಂಪ್ ಸೆಟ್ ಇರುತ್ತದೆ ಎಂದರೆ ಸರಿಯಲ್ಲ. ಬೊರ್ ವೆಲ್ ಹಾಗೂ ಪಂಪ್ ಸೆಟ್ ಇರುವುದನ್ನು ಮರೆಮಾಚಿ ನಾನು ಈ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**6.** 18 ನೇ ದಾವಾ ಆಸ್ತಿಯಾದ ಸರ್ವೇ ನಂ. 60 ರಲ್ಲಿ ಒಂದು ಬೋರ್ ವೆಲ್, ಐಪಿ ಸೆಟ್, ಪಂಪ್ ಸೆಟ್ ಹಾಗೂ 2 ಹುಣಸೇ ಮರಗಳು ಇರುತ್ತವೆ ಎಂದರೆ ಸರಿಯಲ್ಲ. ಅವುಗಳನ್ನು ಉದ್ದೇಶ ಪೂರಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

**7.** 2 ನೇ ಪ್ರತಿವಾದಿ ಕೆ.ಸಿ ನಾಗರಾಜ್ ಹೆಸರಿನಲ್ಲಿ ಪಂಚಾಯಿತಿ ಖಾತೆ ಸಂಖ್ಯೆ 22 ರಲ್ಲಿ ಕ್ಷೇತ್ರ 48 X 22 ಅಳತೆ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿಯೂ ಅಳತೆ ಬಗ್ಗೆ ಮಾಹಿತಿ ಇಲ್ಲದೇ ಇರುವ ಕಾರಣಕ್ಕೆ ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ.

**8.** 5 ನೇ ಪ್ರತಿವಾದಿ ಕೆ.ಸಿ ವೆಂಕಟರವಣಪ್ಪ ಹೆಸರಿನಲ್ಲಿ ಕ್ಷೇತ್ರ 66 X 22 ಅಳತೆ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೇಲಿನ 2 ಮನೆಗಳು ಓಎಸ್ 69/2015 ರ ದಾವೆಯಲ್ಲಿ ಶಿವಣ್ಣ ಭಾಗಕ್ಕೆ ಹೋಗಿದ್ದು ಅವುಗಳನ್ನು ನಾನು ಉದ್ದೇಶ ಪೂರಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

**9.** ಒಂದು ಹಿರೋ ಹೊಂಡಾ ಪ್ಯಾಷನ್ ಪ್ರೊ ದ್ವಿಚಕ್ರ ವಾಹನ ಸಂಖ್ಯೆ ಕೆಎ–07–ಆರ್–8094 ರ ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯೂ ನನ್ನ ಹೆಂಡತಿ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ಶಿಫ್ಟ್ ಡಿಸೈರ್ ಕಾರು ಹಾಗೂ ದ್ವಿಚಕ್ರ ವಾಹನವನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದು, ಅವುಗಳನ್ನು ಉದ್ದೇಶ ಪೂರಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಶಿಫ್ಟ್ ಡಿಸೈರ್ ಕಾರನ್ನು ಈ ದಾವೆಯನ್ನು ದಾಖಲಿಸುವ ಮೊದಲೇ ಮಾರಾಟ ಮಾಡಲಾಗಿದೆ. ಸದರಿ ಕಾರನ್ನು ನಾನು ಈ ದಾವೆಯನ್ನು ದಾಖಲಿಸಿದ ನಂತರ ಅಂದರೆ ದಿ. 19.05.2023 ರಂದು ನಾಗರಾಜ್ ಎಂ.ವಿ ರವರಿಗೆ ಮಾರಾಟ ಮಾಡಿದ್ದೇನೆಂದರೆ ಸರಿಯಲ್ಲ. ಕಾರನ್ನು ನಾನು ಒಬ್ಬನೇ ಮಾರಾಟ ಮಾಡಿ ಹಣವನ್ನು ಖರ್ಚು ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.